


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

Rtn. K. Palaksha
District Governor 2025-26

Rtn. Anand R.
President, Mob: 99800 93066

Rtn. Vishwas Y.
Secretary, Mob : 99800 63180

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –29 ದಿನಾಂಕ : 28–01–2026


**ದಿನಾಂಕ: 28.01.2026 ರಂದು ರೋಟರಿ ಕ್ಲಬ್ ಶಿವಮೊಗ್ಗದ ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮ. ಅಂದು ಶಿವಮೊಗ್ಗೆಯ ಖ್ಯಾತ ಗಾಯಕರಾದ ಶ್ರೀ ಮಾಯಾ ಬ್ರಹ್ಮಾಚಾರ್‌ರವರಿಂದ ಕರೋಕೆ ಮೂಲಕ ಹಳೆಯ ಕನ್ನಡ ಚಿತ್ರಗೀತೆಗಳ ಸುಶ್ರಾವ್ಯಗಾಯನ ಜೊತೆಗೆ ಪಿಹೆಚ್‌ಎಫ್ ಜಿ. ಸತ್ಯನಾರಾಯಣ ರವರಿಂದ ನಿರೂಪಣೆಯೊಂದಿಗೆ ಅಂದಿನ ಕಾರ್ಯಕ್ರಮ ಹಾಗೂ ಇತ್ತೀಚೆಗೆ ನಡೆದ ರೋಟರಿ ಜಿಲ್ಲಾ ಸಮ್ಮೇಳನದಲ್ಲಿ ಪಾಲ್ಗೊಂಡ ಮೂವರು ಸದಸ್ಯರುಗಳ ಅನಿಸಿಕೆಯೊಂದಿಗೆ, ಅಧ್ಯಕ್ಷರಾದ ರೊ. ಆರ್. ಆನಂದ್‌ರವರ ಅಧ್ಯಕ್ಷತೆಯಲ್ಲಿ ಮತ್ತು ಸಹ ಕಾರ್ಯದರ್ಶಿಯಾದ ರೊ. ಶ್ರೀಕಾಂತ್ ನಾಡಿಗ್‌ರವರು ಅಂದಿನ ಸಭೆಯ ಕಾರ್ಯದರ್ಶಿಯಾಗಿ ವೇದಿಕೆಯಲ್ಲಿ ಕಾರ್ಯನಿರ್ವಹಣೆಯೊಂದಿಗೆ ಸಭೆ ನಡೆಯಿತು. ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸುವುದರ ಮೂಲಕ ಸಭೆ ಆರಂಭವಾಯಿತು.**

ನಮ್ಮ ಕ್ಲಬ್‌ನ ಮಾಜಿ ಸದಸ್ಯರಾದ, ಕೊಡುಗೈ ದಾನಿಗಳಾಗಿದ್ದ ದಿ. ಶ್ರೀ ರವೀಂದ್ರನಾಥ ಶಾಸ್ತ್ರಿಯವರ ಧರ್ಮಪತ್ನಿ ಶ್ರೀಮತಿ ಕಮಲಾ ರವೀಂದ್ರರವರು ಇತ್ತೀಚೆಗೆ ನಿಧನರಾಗಿದ್ದು, ಮೃತರ ಗೌರವಾರ್ಥ ಒಂದು ನಿಮಿಷದ ಮೌನವಾಚರಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದುಃಖವನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಲಾಯಿತು. ಅವರು ನಮ್ಮ ರೋಟರಿ ಸಭಾಂಗಣಕ್ಕೆ ಅತ್ಯುನ್ನತ ದೇಣಿಗೆ ನೀಡಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು.

ಶ್ರೀಮತಿ ಶ್ರೀದೇವಿ ಭಟ್‌ರವರು 'ಅಲ್ಲಿ ನೋಡಲು ರಾಮ ಇಲ್ಲಿ ನೋಡಲು ರಾಮ ಎಲ್ಲೆಲ್ಲಿ ನೋಡಲು ಅಲ್ಲಿ ಶ್ರೀರಾಮ' ಎಂಬ ಸುಶ್ರಾವ್ಯಗಾಯನದ ಮೂಲಕ ಪ್ರಾರ್ಥನೆಯನ್ನು ಮಾಡಿದರು. ಎಂದಿನಂತೆ ತಮ್ಮ ವಿಶಿಷ್ಟ ಶೈಲಿಯಲ್ಲಿ ರೊ.ಎಸ್.ಜಿ. ಗೋಪಾಲ್‌ರವರು ಸರ್ವರನ್ನು ಸ್ವಾಗತಿಸಿದರು. ರೊ.ವೀರಣ್ಣ ಎ. ಹುಗ್ಗಿ ಮಾಜಿ ಅಧ್ಯಕ್ಷರು, ರಸ್ತೆ ಸುರಕ್ಷತೆ ಬಗ್ಗೆ ಶಾಲಾ ಮಕ್ಕಳಿಗೆ ತಿಳುವಳಿಕೆ ನೀಡುವ ಅಂಗವಾಗಿ ಹಮ್ಮಿಕೊಂಡಿರುವ ತರಬೇತಿ ಶಿಬಿರದ ಬಗ್ಗೆ ಮಾಹಿತಿ ನೀಡಿದರು. ರೊ. ಶ್ರೀಕಾಂತ್ ನಾಡಿಗ್‌ರವರು ಪ್ರಕಟಣೆ ನೀಡಿದರು. ಜೊತೆಗೆ ರೊ. ಶೈಲಿನ್ ಮತ್ತು ಶ್ರೀಮತಿ ಶೀಲಾ ಹೆಚ್.ಎಂ.ರವರು ಅಂದೇ ತಮ್ಮ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡಿರುವುದರ ಹಿನ್ನೆಲೆಯಲ್ಲಿ ದಂಪತಿಗಳನ್ನು ವೇದಿಕೆಗೆ ಆಹ್ವಾನಿಸಿ, ಮುಖ್ಯ ಅತಿಥಿಗಳಿಂದ ನೆನಪಿನ ಕಾಣಿಕೆ ಕೊಡಿಸಲಾಯಿತು.



ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಡೆದ ರೋಟರಿ ಜಿಲ್ಲಾ ಸಮ್ಮೇಳನದಲ್ಲಿ ತಮ್ಮ ಅನುಭವಗಳನ್ನು ಕೆಲವು ಸದಸ್ಯರು ಹಂಚಿಕೊಂಡರು. ಆ ಬಗ್ಗೆ ರೊ.ಎನ್.ವಿ.ಭಟ್‌ರವರು ನಿರೂಪಿಸಿದರು. ಮೊದಲಿಗೆ ರೊ.ಟಿ.ಕೆ.ಎಂ. ಭಟ್‌ರವರು ಸಮ್ಮೇಳನದ ಬಗ್ಗೆ ಅಲ್ಲಿನ ಕಾರ್ಯಕ್ರಮದ ತಯಾರಿಗಳ ಬಗ್ಗೆ ಮಾತನಾಡಿದರು. ಜೊತೆಗೆ ಹಿಂದಿನ ವರ್ಷಗಳಲ್ಲಿ ಹಾಗೂ ಇತ್ತೀಚಿನ ವರ್ಷಗಳಲ್ಲಿ ಆಗಿರುವ ಬದಲಾವಣೆ ಹಾಗೂ ಹೊಸತನಗಳ ಬಗ್ಗೆ ಮಾತನಾಡಿದರು. ಊಟ–ನೋಟ ಬಹಳ ಚೆನ್ನಾಗಿತ್ತು. ಮುಂದಿನ ವರ್ಷಕ್ಕೆ ಈಗಲೇ 1000 ರಿಜಿಸ್ಟ್ರೇಷನ್ ಆಗಿರುವುದರ ಬಗ್ಗೆ ಮಾಹಿತಿ ನೀಡಿದರು.

ರೊ. ಎನ್.ವಿ. ಭಟ್‌ರವರು ಮಾತನಾಡಿ, ಶುಕ್ರವಾರದಿಂದ ಭಾನುವಾರದವರೆಗಿನ ನಡೆದ ಕಾರ್ಯಕ್ರಮಗಳ ಬಗ್ಗೆ ಬೆಳಕು ಚೆಲ್ಲಿದರು. ಶುಕ್ರವಾರ ಸಂಜೆ ಎಸ್.ಡಿ.ಎಂ.ಕಾಲೇಜ್ ವಿದ್ಯಾರ್ಥಿಗಳಿಂದ ಕಲಾವೈಭವ ಪ್ರದರ್ಶನ ನಡೆಯಿತು.

ಶನಿವಾರ ಧ್ವಜಾರೋಹಣದ ನಂತರ ತುಮಕೂರಿನ ರಾಮಕೃಷ್ಣಾಶ್ರಮದ ಸ್ವಾಮಿ ವೀರೇಶಾನಂದ ಸರಸ್ವತಿಯಿಂದ ಆಶೀರ್ವಚನ. ಹಿಂದಿನ ಇಸ್ರೋ ಚೇರ್ಮನ್ ಸೋಮನಾಥರಿಂದ ಮಾತು. ಅಂತರರಾಷ್ಟ್ರೀಯ ಪ್ರತಿನಿಧಿ, ರೊ. ತುಷಾರ್‌ಷಾರ ಉಪಸ್ಥಿತಿ.

## ಈ ವಾರದ ಸಭೆ

**ದಿನಾಂಕ: 4–2–2026, ಬುಧವಾರ** **ಸಂಜೆ 6:45 ಗಂಟೆಗೆ**

**ಅತಿಥಿ: ರೊ. ಹೆಚ್. ಎಸ್. ರಘುರಾಮ್‌ಭಟ್**

ಖ್ಯಾತ ಲೆಕ್ಕ ಪರಿಶೋಧಕರು, ಶಿವಮೊಗ್ಗ

**ವಿಷಯ: 'ಕೇಂದ್ರ ಬಜೆಟ್' – ವಿಶ್ಲೇಷಣೆ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ












ಸೇನೆಯಲ್ಲಿ ಸೇವೆ ಸಲ್ಲಿಸಿದ ಲೆ.ಜ. ಬಿ.ಎಸ್. ರಾಜುರವರಿಂದ ಸೇನೆಯಲ್ಲಿ ಅವರ ಪಾತ್ರದ ಬಗ್ಗೆ ಮಾತು ತುಂಬಾ ಆಸಕ್ತಿದಾಯಕವಾಗಿತ್ತು. ನಿವೃತ್ತಿ ನಂತರ ಅವರು ಕೈಗೊಂಡ ಸಮಾಜ ಸೇವೆ. ಸಣ್ಣ ವಯಸ್ಸಿಗೆ ಮೀರಿದ ಪ್ರತಿಭೆ ಹೊಂದಿರುವ ರೌಲ್ ಜಾನ್ ಅಜುರವರಿಂದ ಕೃತಕ ಬುದ್ಧಿಮತ್ತೆಯ ಬಗ್ಗೆ ಅದ್ಭುತ ವಿವರಣೆ.

ಅಂದು ಸಂಜೆ ಪ್ರೊ. ಕೃಷ್ಣೇಗೌಡರವರು ತಮ್ಮ ಗಂಭೀರ ಮಾತಿನಿಂದ ಸಭಿಕರು ತಲೆದೂಗುವಂತೆ ಮಾಡಿದರು.

ಇದೇ ಸಂದರ್ಭದಲ್ಲಿ ಇಬ್ಬರಿಗೆ 'ಯಂಗ್ ಅಚೀವ್‌ಮೆಂಟ್ ಅವಾರ್ಡ್' ನೀಡಲಾಯಿತು. ಯುವ ಉದ್ಯಮಿಗಳಾದ, ಹಟ್ಟಿ ಕಾಫಿ ಕಂಪನಿ ಮಾಲೀಕರಾದ ಶ್ರೀ ಮಹೇಂದ್ರರವರಿಗೆ ಮತ್ತು ಜಾರ್ ಆ್ಯಪ್ ಕಂಪನಿ ಮಾಲೀಕರಾದ ಶ್ರೀ ನಿಶ್ಚಯ್‌ರವರಿಗೆ ಅವಾರ್ಡ್ ಪ್ರದಾನ ಮಾಡಲಾಯಿತು. ಇಬ್ಬರೂ ಹಾಸನದವರೇ ಎಂಬುದು ವಿಶೇಷ.

ನಂತರ ಮುಂದಿನ ಗವರ್ನರ್ ರೊ.ಬಿ.ಎಂ.ಭಟ್‌ರವರಿಂದ 11 ನೇ ಜಿಲ್ಲಾ ಸಮ್ಮೇಳನದ ವಿವರ. ಅದಕ್ಕೆ ಅವರು ಇಟ್ಟಿರುವ ಹೆಸರು 'ಭೀಮರಥ'.

ಅಂದು ರಾತ್ರಿ ಕೀ ಬೋರ್ಡ್ ಇಲ್ಲದೇ ಕೆಮೆಲಿಯನ್ ತಂಡದಿಂದ ಅದ್ಭುತ ಸಂಗೀತವನ್ನು ದೇಸೀಯ ವಾದ್ಯ ಸಂಗೀತದೊಂದಿಗೆ ನುಡಿಸಲಾಯಿತು. ಅದಕ್ಕೆ ಹಿರಿಯಕಿರಿಯರೆನ್ನದೇ ನಮ್ಮ ಕ್ಲಬ್‌ಎಲ್ಲಾ ಸದಸ್ಯರುಗಳು ಹೆಜ್ಜೆ ಹಾಕಿದುದು ವಿಶೇಷವಾಗಿತ್ತು. ಎಲ್ಲರೂ ತುಂಬಾ ಖುಷಿಯನ್ನು ಅನುಭವಿಸಿದೆವು.

ಭಾನುವಾರದಂದು ಟಾಟಾ ಗ್ರೂಪ್‌ನ ಶ್ರೀ ಹೆಚ್.ಎನ್. ಶ್ರೀನಿವಾಸರವರಿಂದ ಟಾಟಾ ಗ್ರೂಪ್ ಹಾಗೂ ರೋಟರಿ ಸೇವೆಯ ಬಗ್ಗೆ ವಿವರಣೆ.

ವಕೀಲೆ ಶ್ರೀಮತಿ ಅನಿತಾ ರವಿಶಂಕರ್‌ರವರಿಂದ "ಮಹಿಳಾ ಸಬಲೀಕರಣ ಹಾಗೂ ಶೋಷಣೆ" ಕಾನೂನಿನ ಅಂಶಗಳ ಬಗ್ಗೆ ಮಾತನಾಡಿದರು. ಮಿಮಿಕ್ರಿ ಗೋಪಿಯವರಿಂದ ಅದ್ಭುತವಾದ ಹಾಸ್ಯ ಚಟಾಕಿಗಳ ಕಾರ್ಯಕ್ರಮಗಳು ನಡೆಯಿತು.

ಎಲ್ಲವೂ ಚೆನ್ನಾಗಿತ್ತು. ಆದರೆ ಪ್ಲಾಸ್ಟಿಕ್‌ಗಳ ಬಳಕೆ ಅತಿಯಾಗಿದ್ದು, ಅದಕ್ಕೊಂದು ಪರಿಹಾರ ಕಂಡುಕೊಳ್ಳಲೇಬೇಕಾಗಿದೆ ಎಂದರು.

ನೂತನ ಸದಸ್ಯರಾದ ರೊ.ಉದಯ ನಾಯ್ಕರವರು ಮಾತನಾಡಿ, ಹೊಸ ಸದಸ್ಯನಾದ ನನಗೆ ಈ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ದೊರಕಿದ್ದು, ನನ್ನ ಸೌಭಾಗ್ಯ. ಸಮ್ಮೇಳನ ಬಹಳ ಅಚ್ಚುಕಟ್ಟಾಗಿ ಮೂಡಿ ಬಂತು. ಅಚ್ಚುಕಟ್ಟಾದ ಊಟೋಪಚಾರಗಳು, ನಮ್ಮ ಮನಸ್ಸನ್ನು ಮುದಗೊಳಿಸಿದವು ಎಂದರು.

ಅಂದಿನ ಸಭೆಯಲ್ಲಿ ಶಿವಮೊಗ್ಗೆಯನ್ನು ಹಾಗೂ ನಮ್ಮ ರೋಟರಿ ಸದಸ್ಯತ್ವವನ್ನು ಬಿಟ್ಟು ತೆರಳುತ್ತಿರುವ ಕ್ಲಬ್‌ನ ಮಾಜಿ ಕಾರ್ಯದರ್ಶಿ ರೊ.ಸಿ.ಬಿ. ವೀರಣ್ಣನವರು ಮಾತನಾಡಿ, ಈವರೆಗೆ ತಮಗೆ ದೊರಕಿದ ಪ್ರೀತಿ ವಿಶ್ವಾಸವನ್ನು ನಾನೆಂದೂ ಮರೆಯುವುದಿಲ್ಲ. ಈ ಪ್ರದೇಶವನ್ನು ಬಿಟ್ಟು ಹೋಗಲು ತುಂಬಾ ಬೇಸರವಾಗುತ್ತದೆ. ಆದರೆ ಅನಿವಾರ್ಯ ಕಾರಣಗಳಿಂದ ಹೋಗಬೇಕಾಗಿದೆ ಎನ್ನುತ್ತಾ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ತಿಳಿಸಿದರು. ಕೊನೆಯಲ್ಲಿ ರೊ.ಶ್ರೀಕಾಂತ ನಾಡಿಗ್‌ರವರಿಂದ ವಂದನಾರ್ಪಣೆಯಾಯಿತು.

ನಂತರ ಹಳೆಯ ಚಿತ್ರಗೀತೆಗಳು ಅದರಲ್ಲೂ ಡಾ.ರಾಜಕುಮಾರ್ ಮತ್ತು ಪಿ.ಬಿ. ಶ್ರೀನಿವಾಸರವರು ಹಾಡಿದ ಹಾಡುಗಳನ್ನು ಶ್ರೀ ಮಾಯಾ ಬ್ರಹ್ಮಾಚಾರ್‌ರವರು ಪ್ರಸ್ತುತಪಡಿಸಿದರು. ಹಾಡುಗಳ ಗಾಯನದ ಮುನ್ನ ಹಾಡಿನ ಬಗ್ಗೆ ಶ್ರೀ ಜಿ ಸತ್ಯನಾರಾಯಣರವರು ನಿರೂಪಣೆ ಮಾಡಿದರು. ಕಾರ್ಯಕ್ರಮ ಅಚ್ಚುಕಟ್ಟಾಗಿ ಮೂಡಿಬಂತು. ಗಾಯನ ಕಾರ್ಯಕ್ರಮದ ನಂತರ ಶ್ರೀ ಮಾಯಾ ಬ್ರಹ್ಮಾಚಾರ್ ಮತ್ತು ಜಿ.ಸತ್ಯನಾರಾಯಣರವರಿಗೆ ಅಧ್ಯಕ್ಷರಾದ ರೊ.ಆರ್.ಆನಂದ್, ರೊ.ಎನ್.ಎಸ್. ಶ್ರೀಧರ್, ರೊ.ಡಿ.ಎಲ್. ಮಂಜುನಾಥ್, ರೊ.ಎನ್.ವಿ. ಭಟ್, ರೊ. ಕೆ. ಸೂರ್ಯ ನಾರಾಯಣ ಉಡುಪರು ಸೇರಿ ನೆನಪಿನ ಕಾಣಿಕೆ ನೀಡಿದರು.

**ಕಾರ್ಯಕ್ರಮದಲ್ಲಿ ಹಳೆಯ ಚಲನಚಿತ್ರಗೀತೆಗಳಾದ,**

- ಮೂಷಿಕ ವಾಹನ ಮೋದಕ ಹಸ್ತ
- ನಗುತಾ ನಗುತಾ ಬಾಳೂ ನೀನು
- ಬಾಳುವಂತ ಹೂವಿದು ಬಾಡುವಾಸೆ ಏಕೆ?
- ನಿನದೇ ನೆನಪು ದಿನವೂ ಮನದಲ್ಲಿ
- ಒಲವೇ ಜೀವನ ಸಾಕ್ಷಾತ್ಕಾರ, ಒಲವೇ ಮರೆಯದ ಮಮಕಾರ
- ತಂ ನಂ ತಂ ನಂ ಮನವು ಮಿಡಿಯುತಿದೆ
- ರವಿವರ್ಮನ ಕುಂಚದ ಕಲೆ ಬೆಲೆ ಸಾಕಾರವೋ
- ನಾವಾಡುವ ನುಡಿಯೇ ಕನ್ನಡನುಡಿ
- ಇಳಿದು ಬಾ ತಾಯಿ ಇಳಿದು ಬಾ
- ಎಂದೆಂದು ನಿನ್ನನು ಮರೆತು ಬದುಕಿರಲಾರೆ
- ನಾದಮಯ ಈ ಲೋಕವೆಲ್ಲಾ
- ನನ್ನ ನಿನ್ನ ಮನವು ಸೇರಿತು ನನ್ನ ನಿನ್ನ ಹೃದಯ ಹಾಡಿತು.
- ಆ ರತಿಯೇ ಧರೆಗಿಳಿದಂತೆ

ಮುಂತಾದ ಹಾಡುಗಳ ಸವಿಯನ್ನು ಸದಸ್ಯರೆಲ್ಲರೂ ಸವಿದರು. ಕಾರ್ಯಕ್ರಮದ ಕೊನೆಯಲ್ಲಿ ಸುಗ್ರಾಸ ಭೋಜನದಲ್ಲಿ ಎಲ್ಲರೂ ಪಾಲ್ಗೊಂಡರು.




ನಮ್ಮ ರೋಟರಿ ಕ್ಲಬ್ ಶಿವಮೊಗ್ಗದ ಪಿತಾಮಹ
**ಪಿಜಿಡಿ. ಡಾ. ಪಿ. ನಾರಾಯಣ್‌ರವರಿಗೆ**
ಸೀನಿಯರ್ ಚೇಂಬರ್ ಇಂಟರ್‌ನ್ಯಾಷನಲ್
ಭಾವನಾ ಲೀಜನ್ ವತಿಯಿಂದ
**'ಜವಾಬ್ದಾರಿಯುತ ಮತ್ತು ಸಕ್ರಿಯ ಪೌರತ್ವ ಪ್ರಶಸ್ತಿ'**
ನೀಡಿ ಗೌರವಿಸಲಾಗಿದೆ.

**ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ಜಿಲ್ಲಾ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ದಿನಾಂಕ: 29-01-2026ರಂದು ಶಾಲಾ ಮಕ್ಕಳಿಗೆ ರಸ್ತೆ ಸುರಕ್ಷತೆ ಬಗ್ಗೆ ತಿಳುವಳಿಕೆ ನೀಡುವ ಅಂಗವಾಗಿ 'ಸಂಚಾರಿ ಜಾಗೃತಿ ಅರಿವು' ಕಾರ್ಯಕ್ರಮವನ್ನು ಡಿ.ವಿ.ಎಸ್. ಇಂಡಿಪೆಂಡೆಂಟ್ ಜ್ಯೂನಿಯರ್ ಕಾಲೇಜ್‌ನಲ್ಲಿ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು.**









**ದಿನಾಂಕ 2026ನೇ ಜನವರಿ 23 ರಿಂದ 25ರವರೆಗೆ ಹಾಸನದಲ್ಲಿ ನಡೆದ ರೋಟರಿ ಝೋನ್ 10ರ ಜಿಲ್ಲಾ ಸಮ್ಮೇಳನ 'ಸ್ಪಂದನ -2026' ಕಾರ್ಯಕ್ರಮದಲ್ಲಿ ನಮ್ಮ ರೋಟರಿ ಸದಸ್ಯರು ಪಾಲ್ಗೊಂಡಿದ್ದರು.**







## ಆಶಾಕಿರಣ 44ನೇ ಸರ್ವಸದಸ್ಯರ ಸಭೆ

ದಿನಾಂಕ: 15-02-2026ನೇ ಭಾನುವಾರ ಸಮಯ: ಬೆಳಿಗ್ಗೆ 11 ಕ್ಕೆ
ಸ್ಥಳ: ಆಶಾಕಿರಣ, ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ, ವಿದ್ಯಾನಗರ, ಶಿವಮೊಗ್ಗದಲ್ಲಿ
**ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಯ 44ನೇ ಸರ್ವ ಸದಸ್ಯರ ಸಭೆಯನ್ನು ಅಧ್ಯಕ್ಷರಾದ ಶ್ರೀಮತಿ ಡಾ. ರಜನಿ ಪೈ**
ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿದೆ.
ತಾವುಗಳು ಸಮಯಕ್ಕೆ ಸರಿಯಾಗಿ ಹಾಜರಿದ್ದು,
ತಮ್ಮ ಅಮೂಲ್ಯ ಸಲಹೆ, ಸೂಚನೆ ನೀಡಿ,
ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಲಾಗಿದೆ.

## ಕಂಬನಿ

ಕೊಡುಗೈ ದಾನಿಗಳೂ ಹಾಗೂ ನಮ್ಮ ರೋಟರಿ ಸಭಾಂಗಣಕ್ಕೆ ಹೆಚ್ಚಿನ ದೇಣಿಗೆಯನ್ನು ನೀಡಿ ಇತರರಿಗೆ ಮಾದರಿಯಾಗಿದ್ದ ನಮ್ಮ ಕ್ಲಬ್‌ನ ಮಾಜಿ ಸದಸ್ಯರು, ಕೊಡುಗೈ ದಾನಿಗಳೂ ಆಗಿದ್ದ ದಿ.ರವೀಂದ್ರನಾಥ ಶಾಸ್ತ್ರಿಯವರ ಧರ್ಮಪತ್ನಿ ಶ್ರೀಮತಿ ಕಮಲಾ ರವೀಂದ್ರರವರು ನಿಧನರಾಗಿದ್ದು, ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಆಶಿಸಿ, ರೋಟರಿ ಎಲ್ಲಾ ಸದಸ್ಯರುಗಳು ಅವರ ಅಗಲಿಕೆಗೆ ಕಂಬನಿ ಮಿಡಿದಿದ್ದಾರೆ.



## ಸಂಪಾದಕೀಯ

### ಕಡಲ ದಂಡೆಯ ಬಾಳು

ದೈನಂದಿನ ಅನೇಕ ಚಿತ್ರಗಳು ಮತ್ತು ಪ್ರಕ್ರಿಯೆಗಳು ಅದೆಷ್ಟೋ ಅನುಭವಗಳಿಗೆ ದೃಷ್ಟಾಂತವಾಗಬಲ್ಲವು. ಕಾಣುವ ಕಣ್ಣು ಮತ್ತು ಅದರ ಮೂಲಕ ಮಿದುಳನ್ನು ಪ್ರವೇಶಿಸಿ ಹೃದಯಕ್ಕೆ ಸಂದೇಶ ಕೊಡಬೇಕಷ್ಟೆ. ಈ ಸಂದೇಶಗಳೇ ವಿಚಾರಗಳಾಗಿ ನಮ್ಮ ಬದುಕನ್ನು ರೂಪಿಸುತ್ತವೆ. ಅನೇಕ ಸಂತರು ಶರಣರು ಕವಿ ಮುನಿಗಳು ಇಂತಹ ಉದಾಹರಣೆಗಳ ಮೂಲಕವೇ ಅನುಭವವೊಂದನ್ನು ಕಣ್ಣಮುಂದೆ ತಂದು ನಿಲ್ಲಿಸುತ್ತಾರೆ. ಅದರಲ್ಲೂ ಕಡಲನ್ನು ಉದಾಹರಿಸುವ ಮಾತುಗಳಂತು ಅಗಾಧವಾಗಿವೆ. ಬಾಳಿನ ವೈಶಾಲ್ಯ ಮತ್ತು ನಶ್ವರತೆ ಎರಡಕ್ಕೂ ಹತ್ತು ಹಲವು ಉದಾಹರಣೆಗಳನ್ನು ನೀಡಬಲ್ಲ ಕಡಲು ಹೀಗೂ ಅಗಾಧವೇ.

ಒಬ್ಬ ಮಹಿಳೆ ದಂಡೆಯಲ್ಲಿ ಕುಳಿತಿರುವಾಗಲೇ ಅವಳ ಪತಿ ಈಜಲು ಕಡಲಿಗೆ ಇಳಿದು ಒಂದು ಅಚಾನಕ ಅಲೆಯ ಅಬ್ಬರಕ್ಕೆ ಕೊಚ್ಚಿ ಹೋಗುತ್ತಾನೆ. ರೋಧಿಸುತ್ತ ಅವಳು ಕಡಲನ್ನು ದೂರಿ 'ಕಡಲು ವಿನಾಶಕಾರಿ' ಎಂದು ದೊಡ್ಡ ಅಕ್ಷರಗಳಲ್ಲಿ ಬರೆದು ಹೋದಳು. ಪಕ್ಕದ ಮತ್ತೊಂದು ಬದಿಗೆ ಒಬ್ಬ ಬಲೆಯನ್ನು ಬೀಸಿ ಮೀನುಗಳನ್ನು ಹಿಡಿದಾಗ ಅವನು ಕೂಡಾ ಖುಷಿಯಿಂದ 'ಕಡಲು ರಕ್ಷಕ' ಎಂದು ಬರೆದು ಹೋದನು. ಅಲ್ಲೇ ತುಸು ದೂರದಲ್ಲಿ ಇಬ್ಬರು ಮಕ್ಕಳು ಮರಳಿನಲ್ಲಿ ಮನೆ ಕಟ್ಟಿ ಆಟವಾಡುವಾಗ ದಂಡೆಯಲ್ಲಿ ಬಿಟ್ಟದ್ದ ಒಬ್ಬ ಹುಡುಗನ ಶೂಗಳು ಅಲೆಯಲ್ಲಿ ತೇಲಿಹೋಗುತ್ತವೆ. ಆ ಹುಡುಗ ಜೋರಾಗಿ ಸಿಟ್ಟಿನಿಂದ ಕೂಗತ್ತಾ, 'ಕಡಲು ಒಬ್ಬ ದೊಡ್ಡ ಕಳ್ಳ' ಎಂದು ಬರೆಯುತ್ತಾನೆ. ಮತ್ತೊಂದು ಬದಿಯಲ್ಲಿ ನಡೆದು ಬರುತ್ತಿದ್ದ ವೃದ್ಧ ಭಿಕ್ಷುಕನಿಗೆ ಅರೆತೆರೆದ ಒಂದು ಕಪ್ಪೆ ಚಿಪ್ಪು ಕಾಣುತ್ತದೆ. ತೆರದು ನೋಡಿದರೆ ಅದರ ಒಳಗೆ ಫಳ ಫಳ ಹೊಳೆವ ಮುತ್ತುಗಳು ಕಾಣಿಸುತ್ತವೆ. ಅತ್ಯಂತ ಖುಷಿಯಿಂದ ಆ ವೃದ್ಧ ಮರಳಿನ ಮೇಲೆ 'ಕಡಲು ಒಂದು ಅಗಾಧ ನಿಧಿ' ಎಂದು ಬರೆಯುತ್ತಾನೆ. ಕಡಲು ಕೊಟ್ಟ ಅನುಭವವನ್ನು ಗ್ರಹಿಸುತ್ತಾ ನಾಲ್ಕು ಮನಸ್ಸುಗಳು ನಾಲ್ಕು ಬಗೆಯಲ್ಲಿ ಮರಳಿನ ಮೇಲೆ ಬರೆಯುವುದರ ಮೂಲಕ ತಮ್ಮ ಭಾವವನ್ನು ವ್ಯಕ್ತಪಡಿಸುತ್ತವೆ. ಎಲ್ಲ ಮುಗಿದು ಕತ್ತಲಾದ ಬಳಿಕ ಅವರವರು ಅವರ ಮನೆಯ ದಾರಿ ಹಿಡಿದಾಗ ಅಗಾಧವಾದ ಅಲೆಯೊಂದು ನುಗ್ಗಿ ಆ ನಾಲ್ವರ ಸಾಲುಗಳನ್ನು ಅಳಿಸಿ ಬಿಡುತ್ತದೆ.

ಬಾಳಿನ ಸಾರವನ್ನೇ ಸಾರುವ ಈ ದೃಷ್ಟಾಂತ ಬಹುವಾಗಿ ಕಾಡಬಲ್ಲದು. ಇರುವ ಮತ್ತು ಇಲ್ಲವಾಗುವ ಗಳಿಗೆಗಳ ಮಧ್ಯೆ ನಾವು ನಮ್ಮ ಬಾಳನ್ನು ಹಸನುಗೊಳಿಸಿಕೊಳ್ಳುವ ಮತ್ತು ಮಾಗುವ ಬಗೆಯನ್ನು ಚೊಕ್ಕವಾಗಿ ಹೇಳಿಬಿಡುತ್ತದೆ. ಜೀವನ ಎಂದರೆ ನಾವು ಘಟನೆಗಳಿಗೆ ಕೊಡುವ ಪ್ರತಿಕ್ರಿಯೆ ಅಷ್ಟೆ. ನಮ್ಮ ಮುಗ್ಧತೆ, ಜಾಣತನ, ಹುಂಬತನ, ಭಾವನಾತ್ಮಕ ಗಟ್ಟಿತನ, ಮಾನಸಿಕ ದೌರ್ಬಲ್ಯ ಇತ್ಯಾದಿಗಳ ಮೂಲಕವೇ ಬಾಳಿಗೆ ಉತ್ತರ ಕೊಡುತ್ತಾ ಹೋಗುತ್ತೇವೆ. ಆದರೆ ಕಡಲಿನ ಮರಳಿನ ಮೇಲೆ ಬರೆದ ಸಾಲುಗಳು ಉಳಿಯುವುದಿಲ್ಲ. 'ಬದುಕಿನ ಸತ್ಯ ಇದು ಅಲ್ಲವೇ ಅಲ್ಲ' ಎಂಬ ಪಾಠವೇ ನಾಳೆ ಮತ್ತೆ ಬಾಳಲು ಪ್ರೇರಣೆ ನೀಡುತ್ತದೆ. ಇಳಿಸಂಜೆ ಖಾಲಿಯಾದ ಕಡಲ ದಂಡೆ ಮತ್ತು ಕಾಣದಾದ ಅಲ್ಲಿನ ಗೆರೆಕೊರೆಗಳು ಕೂಡಾ ಮತ್ತೆ ನಾಳಿನ ಹುಡುಕಾಟಕ್ಕೆ ಪ್ರೇರಣೆಯಾದೀತು. ಜೀವನಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

• ರೊ. ಎಂ. ಮಾಧವಾಚಾರ್



**ಮುದ್ದುರಾಮನ ಚೌಪದಿ...**

**ಕೊಟ್ಟ ಮಾತಿಗೆ ನಡೆವ ವಚನ ಶರಣರ ಕೊಡುಗೆ**
**ಕಾಯಕದ ಹೊಣೆಹೊತ್ತ ವಚನ ಸಂಪದವೋ**
**ವಚನದಲಿ ಸೂಕ್ತಿಯಿದೆ, ತಂಪೆರೆವ ಶಕ್ತಿಯಿದೆ**
**ಅರಿವಿನಾಗರ ವಚನ – ಮುದ್ದುರಾಮ**

## ಅತಿಯಾದ ಜಂಬಳಿಕೆ (Yawning)
### ಕಡಿಮೆ ಮಾಡಲು ಉಪಯುಕ್ತವಾದ ಮನೆಮದ್ದುಗಳು

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

**ಅತಿಯಾದ ಜಂಬಳಿಕೆಗೆ ಕಾರಣಗಳು :–**

ನಿದ್ರೆಯ ಕೊರತೆ, ಅಜೀರ್ಣ/ಗ್ಯಾಸ್ಟ್ರಿಕ್ ಸಮಸ್ಯೆ, ಆಮ್ಲಜನಕ ಕೊರತೆ, ಒತ್ತಡ, ದಣಿವು, ಆಯುರ್ವೇದದ ಪ್ರಕಾರ ವಾತ ದೋಷ ಹೆಚ್ಚಳ.

**ಇದನ್ನು ಕಡಿಮೆ ಮಾಡಲು:–**


- ಶುಂಠಿ ತುಂಡನ್ನು ಚಪ್ಪರಿಸಿ ಅಥವಾ ಶುಂಠಿ ಚಹಾ ಕುಡಿಯಿರಿ. ಇದರಿಂದ ಜೀರ್ಣಶಕ್ತಿ ಹೆಚ್ಚಿಸುತ್ತದೆ.
- 1–2 ಏಲಕ್ಕಿಯನ್ನು ಚಪ್ಪರಿಸಿ, ತಾಜಾತನ ನೀಡುತ್ತದೆ.
- 4–5 ತುಳಸಿ ಎಲೆ ಚಪ್ಪರಿಸಿ ಅಥವಾ ತುಳಸಿ ಕಷಾಯ ಕುಡಿಯಿರಿ. ಇದು ಒತ್ತಡ ಕಡಿಮೆ ಮಾಡುತ್ತದೆ.
- ಬೆಚ್ಚಗಿನ ನೀರಿಗೆ ನಿಂಬೆರಸ ಹಾಕಿ ಕುಡಿಯಿರಿ. ಇದರಿಂದ ದಣಿವು ಕಡಿಮೆ ಆಗುತ್ತದೆ.
- ಪ್ರಾಣಾಯಾಮ ಮಾಡಿ. ಆಳವಾಗಿ 5 ರಿಂದ 10 ಬಾರಿ ಉಸಿರೆಳೆದು ಬಿಡಿ. ಇದರಿಂದ ಆಮ್ಲಜನಕದ ಸರಬರಾಜು ಹೆಚ್ಚುತ್ತದೆ.

**ಉಪಯುಕ್ತ ಸಲಹೆಗಳು :–**

- ಸಮಯಕ್ಕೆ ಸರಿಯಾಗಿ ನಿದ್ರೆ ಮಾಡಿ.
- ಹೆಚ್ಚು ಮಸಾಲೆ, ಎಣ್ಣೆಯ ಆಹಾರ ತಪ್ಪಿಸಿ.
- ಹೆಚ್ಚು ಸಮಯ ಖಾಲಿ ಹೊಟ್ಟೆಯಲ್ಲಿ ಇರಬೇಡಿ.
- ಒತ್ತಡ ನಿಯಂತ್ರಿಸಿ.

**ಗಮನಿಸಿ:**

ನಿರಂತರ ಜಂಬಳಿಕೆ, ತಲೆ ಸುತ್ತು ಅಥವಾ ದೌರ್ಬಲ್ಯ ಇದ್ದರೆ ವೈದ್ಯರನ್ನು ಸಂಪರ್ಕಿಸಿ.




## Happy Birthday Wishes



*Dilip Venkata Sastry*
*30th Jan*



*Madhavachar M.*
*03rd Feb*



*K.S.Shailin*
*03rd Feb*

To,

*Book Post*